ಕರ್ನಾಟಕ ವಿಧಾನಸಭೆ

ಬುಧವಾರ ದಿನಾಂಕ 21ನೇ ಜೂನ್ 2006ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 54 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

11.50 ಎ.ಎಂ.

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:– ಸದನ ತಡವಾಗಿ ಸೇರುತ್ತಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರಬೇಕಾಗಿತ್ತು, ಹನ್ನೊಂದು ಮುಕ್ಕಾಲು ಗಂಟೆಗೆ ಸೇರುತ್ತಿದೆ, ಇದೇನಿದು? ಕೋರಂ ಇತ್ತು ಏನು ಉದ್ದೇಶ; ಈ ಸಭೆಯನ್ನು 3 ದಿವಸದಿಂದ ಯಾವ ದಿಕ್ಕಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ, ಏನು ಪರಿಸ್ಥಿತಿ ದಯವಿಟ್ಟು ತಾವು ಹೇಳಿ, ಬೆಳಿಗ್ಗೆ 11.00 ಗಂಟೆಗೆ ನಾವೆಲ್ಲಾ ಬಂದಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಕೋರಂ ಇತ್ತು ಬೆಳಿಗ್ಗೆ ಹನ್ನೊಂದು ಗಂಟೆಗೆ ಏತಕ್ಕೆ ಕರೆಯಲಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇನ್ನು ಮುಂದೆ ನಾವು ರೂಂನಲ್ಲಿರುತ್ತೇವೆ ತಾವು ಫೋನ್ ಮಾಡಿ ಕರೆಯಿರಿ ನಾವು ಆಮೇಲೆ ಬರುತ್ತೇವೆ, ನಮಗೇನೂ ಕೂಲಿ ಕೊಡುವುದಿಲ್ಲ.

(ಕಾಂಗ್ರೆಸ್ ಸದಸ್ಯರು ಸದನದ ಬಾವಿಯಲ್ಲಿದ್ದರು)

(ಗೊಂದಲ)

ಅಧ್ಯಕ್ಷರು : ಸದನದ ಬಾವಿಯಲ್ಲಿರತಕ್ಕಂಥ ಮಾನ್ಯ ಸದಸ್ಯರುಗಳು ದಯಮಾಡಿ ತಮ್ಮ ಆಸನಗಳಿಗೆ ತೆರಳಬೇಕೆಂದು ವಿನಂತಿ ಮಾಡುತ್ತೇನೆ, ... ದಯಮಾಡಿ ಕುಳಿತುಕೊಳ್ಳಿ ಹೇಳುತ್ತೇನೆ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಸಭೆಯನ್ನು ಕರೆಯಬೇಕಾದರೆ ಒಂದು ಫೋನ್ ಮಾಡಿ ಸರ್, ರೂಂನಲ್ಲಿರುತ್ತೇವೆ ಬರುತ್ತೇವೆ....

ಅಧ್ಯಕ್ಷರು: ಕೆಲವು ಸಾರಿ ಏನಾಗುತ್ತದೆಂದರೆ,.....

ಶ್ರೀ ಜೆ.ಸಿ. ಮಾಧುಸ್ವಾಮಿ: ಕೆಲವು ಸಾರಿ ಅಲ್ಲ, ಮೂರು ದಿವಸದಿಂದ ಇದು ನಡೆಯುತ್ತಿರುವುದು, ಸಭೆಯನ್ನು 11 ಗಂಟೆಗೆ ಕರೆಯಿರಿ.....

ಅಧ್ಯಕ್ಷರು : ತಾವೆಲ್ಲಾ ಹಿರಿಯ ಸದಸ್ಯರು, ಈ ರೀತಿಯ ಘಟನೆಗಳು ಅನೇಕ ಸಾರಿ ನಡೆದಿವೆ, ಕಾರ್ಯಕಲಾಪಗಳು ನಡೆಯದಿದ್ದ ಕಾಲದಲ್ಲಿ, ಮಾತನಾಡಿ